**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 2801/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಡಿ ಡಬ್ಲ್ಯೂ 1**

**ದಿನಾಂಕಃ 22.04.2025**

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಎಂ ಆರ್ ವಕೀಲರಿಂದಃ**

ಪಿರ್ಯಾದಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ. ಪಿರ್ಯಾದಿ ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಪಿರ್ಯಾದಿಯ ಅಣ್ಣ ತಮ್ಮಂದಿರು, ತಂದೆ ತಾಯಿ ಏನು ಮಾಡುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಸಹ ಸುಮಾರು 15 ವರ್ಷಗಳಿಂದ ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಅಂಗಡಿಯನ್ನು ನಡೆಸಲು ಪಾರವಾನಿಗೆಯನ್ನು ಪಡೆದಿದ್ದೇನೆ. ಯಾವುದೇ ವ್ಯಾಪಾರವನ್ನು ಮಾಡುವ ಸಮಯದಲ್ಲಿ ದಾಖಲೆಗಳ ಆಧಾರದ ಮೇಲೆ ಮಾಡಬೇಕು ಎಂಬ ಜ್ಞಾನ ನನಗೆ ಇದೆ ಎಂದರೆ ಸರಿ. ನಾನು ನನ್ನ ವ್ಯಾಪಾರದಲ್ಲಿ ಮಾಲನ್ನು ಹಾಕಲು ಮತ್ತು ತೆಗೆಯಲು ಅದರ ವ್ಯವಹಾರವನ್ನು ಬಿಲ್ ಮೂಾಲಕ ಮಾಡುತ್ತೇನೆ ಎಂದರೆ ಸರಿ. ನನ್ನ ಮೂಲ ಹರಿಹರ. ನನ್ನ ತಂದೆ ಹರಿಹರದ ಹರ್ಲಾಪುರದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಾರೆ. ಪಿರ್ಯಾದಿ ತಂದೆ ಅಲ್ಲಾವುದ್ದೀನ್ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ನಾನು ಆಕ್ಸಿಸ್ ಬ್ಯಾಂಕನಲ್ಲಿ ಖಾತೆ ಹೊಂದಿದ್ದೇನೆ. ಬ್ಯಾಂಕನಿಂದ ಸಾಲ ಪಡೆಯಬೇಕಾದರೆ ಸದರಿ ಬ್ಯಾಂಕ್ ಮ್ಯಾನೇಜರ್ ರಿಂದ ಮಾಹಿತಿ ಪಡೆಯುತ್ತೇವೆ ಎಂದರೆ ಸರಿ. ಪಿರ್ಯಾದಿ ಕೆನರಾ ಬ್ಯಾಂಕನಲ್ಲಿ ಖಾತೆಯನ್ನು ಹೊಂದಿದ್ದಾರೆ. ನನ್ನ ತಂದೆ ತೀರಿಕೊಂಡಿದ್ದಾರೆ. ನನಗೆ ಇಬ್ಬರು ಅಣ್ಣ ತಮ್ಮಂದಿರು. ಸದರಿಯವರು ಪೇಂಟಿಂಗ್ ಕೆಲಸ ಮಾಡುತ್ತಾರೆ. ಪಿರ್ಯಾದಿ ಮತ್ತು ನನ್ನ ಪರಿಚಯವಾದ 3 ವರ್ಷಗಳ ತರುವಾಯ ನಾವು ವ್ಯವಹಾರ ಮಾಡಿದ್ದೆವು. ಪಿರ್ಯಾದಿ ನನಗೆ ಸಾಲ ಕೊಡಿಸುತ್ತೇನೆ ಎಂದು ನನ್ನ ಚೆಕನ್ನು ಪಡೆದಿದ್ದರು ಎಂದು ಹೇಳಿದ್ದು ಸದರಿ ದಿನದ ನಿಖರವಾದ ದಿನಾಂಕ ತಿಂಗಳು ನನಗೆ ನೆನಪಿಲ್ಲ. ಪಿರ್ಯಾದಿ ಯಾವುದೇ ಬ್ಯಾಂಕಿನ ಏಜೆಂಟರಾಗಿ ಕೆಲಸ ಮಾಡುವುದಿಲ್ಲ. ನನ್ನ ವ್ಯಾಪಾರದಲ್ಲಿ ಬಿಲ್ ಗಳನ್ನು ನೀಡುವಾಗ ಅದರಲ್ಲಿ ಮೊತ್ತ ಮತ್ತು ತೂಕವನ್ನು ನಮೂದಿಸಿ ನೀಡುತ್ತೇನೆ ಎಂದರೆ ಸರಿ. ಯಾವುದೇ ಹಣಕಾಸಿನ ವ್ಯವಹಾರವನ್ನು ದಾಖಲೆಗಳ ಮೂಲಕ ಮಾಡಬೇಕು ಎಂದು ನನಗೆ ಮಾಹಿತಿ ಇದೆ ಎಂದರೆ ಸರಿ. ನಾನು ದಾಖಲೆಗಳನ್ನು ಬಾಯಿ ಮಾತಿಗೆ ನೀಡುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಲ ಕೊಡಿಸುತ್ತೇನೆ ಎಂದು ಹೇಳಿದ್ದರಿಂದ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದಿ ನನಗೆ ಬ್ಯುಸಿನೆಸ್ ಲೋನ್ ಕೊಡಿಸುತ್ತೇನೆ ಎಂದು ಹೇಳಿದ್ದರು. ಈ ವಿಚಾರಕ್ಕಾಗಿ ಪಿರ್ಯಾದಿ ನನ್ನನ್ನು ಬ್ಯಾಂಕಿಗೆ ಕರೆದುಕೊಂಡ ಹೋದ ನಿಖರವಾದ ದಿನಾಂಕ ತಿಂಗಳು ನನಗೆ ನೆನಪಿಲ್ಲ. ಪಿರ್ಯಾದಿ ನನ್ನನ್ನು ಶೋಭಾ ಟಾಕೀಸ್ ಬಳಿ , ಜೆ ಸೆವೆನ್ ಮುಂಭಾಗ ಇರುವ ಕೆನರಾ ಬ್ಯಾಂಕಿಗೆ ಕರೆದುಕೊಂಡು ಹೋಗಿದ್ದರು. ಸದರಿ ಬ್ಯಾಂಕಿನಲ್ಲಿ ನಾವು ಬ್ಯಾಂಕ್ ಮ್ಯಾನೇಜರವರನ್ನು

ಬೇಟಿ ಯಾದೆವು. ಸದರಿ ಸಂದರ್ಭದಲ್ಲಿ ಮ್ಯಾನೇಜರವರು ನನ್ನನ್ನು ನಗರ ಸಭೆ ಪರವಾನಿಗೆ ಪತ್ರ ಮತ್ತು ಇನ್ನು ಒಂದಿಷ್ಟು ದಾಖಲೆಗಳನ್ನು ತರುವಂತೆ ಹೇಳಿದರು. ಸದರಿ ಮ್ಯಾನೇಜರವರು ಪಿರ್ಯಾದಿಗೆ ಪರಿಚಯಸ್ಥರು ಇದ್ದರು. ಕೆನರಾ ಬ್ಯಾಂಕಿನಲ್ಲಿ ನನ್ನ ಖಾತೆ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಬ್ಯಾಂಕಿನವರು ಖಾತೆ ಇದ್ದ ಗ್ರಾಹಕರ ವ್ಯವಹಾರವನ್ನು ಪರಿಗಣಿಸಿ ಸಾಲವನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ಖಾತೆಯನ್ನು ಮಾಡಿಸಿ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಇದಕ್ಕಿಂತ ಪೂರ್ವದಲ್ಲಿ ನಾನು ನನ್ನ ಖಾತೆ ಇರುವ ಆಕ್ಸಿಸ್ ಬ್ಯಾಂಕನಲ್ಲಿ ಸಾಲ ಪಡೆಯುವ ಬಗ್ಗೆ ವಿಚಾರಣೆ ಮಾಡಿದ್ದೆ. ಕೆನರಾ ಬ್ಯಾಂಕಿಗೆ ಬೇಟಿ ನೀಡಿದಾಗ ಖಾತೆ ತೆರೆಯಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿಯು ಪ್ರಯತ್ನ ಪಟ್ಟಿಲ್ಲ ಎಂದು ಮುಂದುವರೆದು ದಾಖಲೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಆಕ್ಸಿಸ್ ಬ್ಯಾಂಕ ಖಾತೆಯಲ್ಲಿ ನಾನು ವ್ಯವಹರಿಸುತ್ತೇನೆ. ಸದರಿ ವ್ಯವಹಾರ ಚೆನ್ನಾಗಿತ್ತು ಎಂದರೆ ಸರಿ. ಆಕ್ಸಿಸ್ ಬ್ಯಾಂಕನವರು ಜಿ ಎಸ್ ಟಿ ಇಲ್ಲ ಎಂದು ಮತ್ತು ಇತರೆ ದಾಖಲೆಗಳು ಇಲ್ಲ ಎಂದು ಹೇಳಿ ಸಾಲವನ್ನು ನೀಡಲು ನಿರಾಕರಿಸಿದರು.

ದಿಃ 12.12.2021 ರಂದು ನಾನು ಪಿರ್ಯಾದಿಯಿಂದ 2,50,000/- ರೂ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿ ತಮ್ಮದಲ್ಲ ಎಂದು ನಿರಾಕರಿಸಿರುತ್ತಾರೆ. ಸದರಿ ದಾಖಲೆ ಸಾಲದ ಹಣದ ಒಪ್ಪಂದದ ಪತ್ರ ಎಂದರೆ ಸರಿಯಲ್ಲ. ಖಲೀಲ್ ಅಹಮ್ಮದ್ ಎಂದರೆ ನಾನು ಬಷೀರ್ ಅಹಮ್ಮದ್ ಎಂದರೆ ನನ್ನ ತಂದೆ. ಇರ್ಫಾನ್ ತಂದೆ ಶೇಖ್ ಅಲ್ಲಾವುದ್ದೀನ ಎಂದರೆ ಪಿರ್ಯಾದಿ. ಸಾಕ್ಷಿಗೆ ಈ ಮೇಲೆ ಹೇಳಿದ ಸದರಿ ದಾಖಲೆಯನ್ನು ತೋರಿಸಲಾಗಿ ಸದರಿ ಛಾಪಾ ಕಾಗದ ಮೊತ್ತ 200/- ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಬಾಂಡ್ ಪೇಪರ್ ಈಗ ತೋರಿಸಿದ ದಾಖಲೆ ಎಂದರೆ ಸರಿ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ಮುಖಾಬಿಲೆಯಾಗಿ ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ದಾಖಲೆ ಖಾಲಿ ದಾಖಲೆ ಇತ್ತು ನಾನು ಸಹಿ ಕೂಡಾ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಇಮ್ರಾನ್ ತಂದೆ ಅಲ್ಲಾವುದ್ದೀನ್ ಪಿರ್ಯಾದಿಯ ಅಣ್ಣ ಎಂದರೆ ಸರಿ. ಕೆಎ 17 ಹೆಚ್ ಜೆ 3020 ನೇ ಟಿ ವಿ ಎಸ್ ಬೈಕ್ ನನ್ನದು. ಸದರಿ ವಾಹನವನ್ನು ನಾನು 2021 ರಲ್ಲಿ ಖರೀದಿ ಮಾಡಿದ್ದೆನು. ಸದರಿ ವಾಹನವನ್ನು ಪಿರ್ಯಾದಿಯ ಅಣ್ಣನವರಿಗೆ 2 ಲಕ್ಷ ರೂಗಳ ಮೊತ್ತಕ್ಕೆ ಅಡ ಇಟ್ಟಿದ್ದೆನು ಎಂದರೆ ಸರಿಯಲ್ಲ.

ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಪಿರ್ಯಾದಿ ನನಗೆ ನೋಟಿಸ್ ನೀಡಿದ್ದರು. ಸದರಿ ನೋಟಿಸನ್ನು ನನಗೆ ನೀಡುವ ಪೂರ್ವದಲ್ಲಿ ನಾನು ಪಿರ್ಯಾದಿ ವಿರುದ್ಧ ಪೊಲೀಸರಿಗೆ ಮತ್ತು ಬ್ಯಾಂಕಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ಮುದುವರೆದು ಬ್ಯಾಂಕಿನಲ್ಲಿ ಪೇಮೆಂಟ್ ಸ್ಟಾಪ್ ಮಾಡಲು ಅರ್ಜಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರುವ ನಿಪಿ.1(ಎ) ಸಹಿ ನನ್ನದು. ನಿಪಿ.1 ಎ ಮತ್ತು ನಿಪಿ.9 ರಲ್ಲಿರುವ ಸಹಿ ಎರಡೂ ನನ್ನದು ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ.1(ಎ) ಸಹಿ ನನ್ನದು

ಎಂದು ನುಡಿಯುತ್ತಾರೆ. ನಾನು ಬ್ಯಾಂಕಿಗೆ ನೀಡಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮತ್ತು ಪಿರ್ಯಾದಿ ನಡುವೆ ಜಗಳವಾದ ನಂತರ ನಾನು ಬ್ಯಾಂಕಿಗೆ ಅರ್ಜಿಯನ್ನು ನೀಡಿರುತ್ತೇನೆ. ಜಗಳವಾದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ನನ್ನ ಮತ್ತು ಪಿರ್ಯಾದಿ ನಡುವೆ ಅವರ ಫ್ಯಾಕ್ಟರಿ ಬಳಿ ಜಗಳವಾಯಿತು. ಸದರಿ ಜಗಳ ಪಿರ್ಯಾದಿ ನನ್ನ ಗ್ರಾಹಕರಿಂದ ಮಾಲನ್ನು ಖರೀದಿ ಮಾಡಿದ್ದರಿಂದ ಜಗಳ ಆಗಿರುತ್ತದೆ. ಪಿರ್ಯಾದಿಯಿಂದ ನೋಟಿಸ್ ಬರುವುದಕ್ಕಿಂತ 6 ತಿಂಗಳ ಪೂರ್ವದಲ್ಲಿ ಜಗಳ ಆಗಿತ್ತು. ಪಿರ್ಯಾದಿ ಸಾಲ ಕೊಡಿಸುತ್ತೇನೆ ಎಂದು ಹೇಳಿ ಮೋಸ ಮಾಡಿದ ಬಗ್ಗೆ ಕೆನರಾ ಬ್ಯಾಂಕ ಮ್ಯಾನೇಜರ್ ವರಿಗೆ ದುಾರು ನೀಡಿಲ್ಲ. ನನಗೆ ದಿಃ 31.10.2022 ರಂದು ನೋಟಿಸ ಬಂದಿರುತ್ತದೆ ಎಂದರೆ ಸರಿ. ದಿಃ 16.11.2022 ರಂದು ನಾನು ವಕೀಲರ ಮೂಲಕ ಉತ್ತರ ನೀಡಿರುತ್ತೇನೆ. ಸದರಿ ಮರು ಉತ್ತರ ನಿಪಿ. 8 ರಲ್ಲಿ ನನ್ನ ಸಹಿ ಇಲ್ಲ. ನನ್ನ ಟಿವಿಎಸ್ ವಾಹನ 2 ತಿಂಗಳ ಕಾಲ ಪಿರ್ಯಾದಿ ಬಳಿ ಇತ್ತು. ಪಿರ್ಯಾದಿ ನನ್ನ ಟಿ ವಿ ಎಸ್ ಬೈಕನ್ನು ನನಗೆ ನೋಟಿಸ್ ನೀಡುವ 2 ತಿಂಗಳ ಪೂರ್ವದಲ್ಲಿ ತೆಗೆದುಕೊಂಡು ಹೋಗಿದ್ದರು. ಪಿರ್ಯಾದಿ ನನ್ನ ಟಿ ವಿ ಎಸ್ ಬೈಕನ್ನು ತೆಗೆದುಕೊಂಡ ಹೋದ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ. 2 ತಿಂಗಳ ಕಾಲ ಪಿರ್ಯದಿಯ ಬಳಿ ಇದ್ದರೂ ನೀವು ಯಾಕೆ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಪಂಚನಾಮೆ ಜರುಗಿಸಲು ಹೋದಾಗ ನನಗೆ ನನ್ನ ಬೈಕ್ ಪಿರ್ಯಾದಿ ಮನೆಯಲ್ಲಿ ಇರುವ ಬಗ್ಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜನಾಂಗದವರು ಪಿರ್ಯಾದಿಗೆ ನೀಡಬೇಕಾದ ಹಣವನ್ನು ನೀಡಿ ಬೈಕನ್ನು ಪಡೆದುಕೋ ಎಂದು ಪಂಚಾಯ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚೆಕನ್ನು ಮರಳಿ ಕೊಡಿ ಎಂದು ಪಂಚಾಯ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಪಿರ್ಯಾದಿಯಿಂದ ನೋಟಿಸ್ ಜಾರಿಯಾದ ನಂತರ ಪಿರ್ಯಾದಿ ವಿರುದ್ಧ ಖಾಸಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದೂರಿನನ್ವಯ ಪೊಲೀಸರಿಂದ ವಿಚಾರಣೆ ಮಾಡಿಸಿ ವಾಹನವನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು ಈ ರೀತಿ ಬೈಕನ್ನು ನನಗೆ ಪಿರ್ಯಾದಿಯಿಂದ ನೋಟಿಸ್ ಬಂದ ನಂತರದಲ್ಲಿ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಖಾಸಗಿ ದೂರಿನ ಸಂಖ್ಯೆ ಪಿ ಸಿ ಆರ್ ನಂ. 39/2022. ಸದರಿ ದೂರು ಸಿಸಿ ನಂ. 46/2023 ರಲ್ಲಿ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ಪ್ರಕರಣದ ವಿರುದ್ಧ ಪಿರ್ಯಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿ ಆರ್ ಪಿ ನಂ. 3159/2024 ರಡಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಪಿರ್ಯಾದಿಯಿಂದ 2,50,000/- ರೂ ಪಡೆದಿದ್ದು ಹಾಗೂ ಪಿರ್ಯಾದಿ ಅಣ್ಣನಿಂದ 2 ಲಕ್ಷ ರೂ ಸಾಲ ಪಡೆದಿದ್ದು ಸದರಿ ಹಣವನ್ನು ಮರುಪಾವತಿ ಮಾಡಬೇಕಾಗುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.8 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದೆ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.8 ರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿದ್ದೇನೆ ಎಂದು ಸಹಿ ಮಾಡಿಲ್ಲ. ಪಿರ್ಯಾದಿ ನನ್ನಿಂದ

ಚಕ್, ಬಾಂಡ್ ಮತ್ತು ಐಡಿಗಳನ್ನು ಪಡೆದುಕೊಂಡ ಬಗ್ಗೆ ನನ್ನ ಮರು ಉತ್ತರದಲ್ಲಿ ಹೇಳಿಲ್ಲ. ಈ ರೀತಿ ದಾಖಲೆಗಳನ್ನು ಪಡೆದಿದ್ದಾರೆ ಎಂದು ನಮೂದಿಸಿ ನಾನು ಬ್ಯಾಂಕಿಗೆ ಅರ್ಜಿಯನ್ನು ನೀಡಿದ್ದೇನೆ. ಸದರಿ ಅರ್ಜಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಮುಂದುವರೆದು ಮುಂದಿನ ತಾರೀಖಿಗೆ ಹಾಜರುಪಡಿಸುತ್ತೇನೆ.

ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮಂಜೂರು ಮಾಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ